Can Fin Homes Ltd
(Sponsor : CANARA BANK)
HOME LOANS ✦ DEPOSITS
Translating Dreams into Reality
ಕ್ಯಾನ್ ಫಿನ್ ಹೋಮ್ಸ್ ಲಿ.

ಕ್ಯಾನ್‌ಫಿನ್ ಹೋಮ್ಸ್ ಲಿ.
ನೋಂದಾಯಿತ ಕಛೇರಿ:
ನಂ.29/1, 1ನೇ ಮಹಡಿ, ಸರ್ ಎಮ್.ಎನ್. ಕೃಷ್ಣ ರಾವ್ ರಸ್ತೆ,
ಲಾಲ್‌ಬಾಗ್ ವೆಸ್ಟ್ ಗೇಟ್ ಹತ್ತಿರ, ಬಸವನಗುಡಿ,
ಬೆಂಗಳೂರು–560 004.
E-mail:compsec@canfinhomes.com
ದೂರವಾಣಿ: 080–26564259 ಫ್ಯಾಕ್ಸ್: 080–26565746
ವೆಬ್:www.canfinhomes.com
CIN:L85110KA1987PLC008699

## ಸೂಚನೆ: ಕಂಪನಿಯ ಸದಸ್ಯರ 32ನೇ ವಾರ್ಷಿಕ ಸಾಮಾನ್ಯ ಸಭೆ, ವಾರ್ಷಿಕ ವರದಿ 2018–19, ಇ–ಮತದಾನ ಮಾಹಿತಿ ರವಾನೆ ಮತ್ತು ಪುಸ್ತಕಗಳ ಸ್ಥಗಿತ

ಈ ಮೂಲಕ ಸೂಚಿಸುವುದೇನೆಂದರೆ:

1. **ಮೇ 22, 2019ರ ಸಭೆಯ ಪ್ರಕಟಣೆಯಲ್ಲಿ ಸೂಚಿಸಿರುವಂತೆ ವ್ಯವಹಾರದ ವಹಿವಾಟು ಮಾಡಲು ಕಂಪನಿಯ ಸದಸ್ಯರ 32ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ಜುಲೈ 17, 2019 ಸೋಮವಾರದಂದು ಬೆಳಗ್ಗೆ 11:00 ಗಂಟೆಗೆ 'ನಿಮ್ಹಾನ್ಸ್ ಕನ್ವೆನ್ಷನ್ ಸೆಂಟರ್', ಲಕ್ಕಸಂದ್ರ ಬಸ್ ನಿಲ್ದಾಣದ ಎದುರು, ಹೊಸೂರು ರಸ್ತೆ, ಬೆಂಗಳೂರು, ಕರ್ನಾಟಕ – 560029, ಇಲ್ಲಿ ನಡೆಸಲಾಗುವುದು.**
2. ವಾರ್ಷಿಕ ಸರ್ವಸದಸ್ಯರ ಸಭಾ ಸೂಚನೆ, ವಿ–ಮತದಾನ ಮಾಡುವ ಕ್ರಮ ಹಾಗೂ 2018–19ನೇ ಸಾಲಿನ ವಾರ್ಷಿಕ ವರದಿಗಳ ವಿದ್ಯುನ್ಮಾನ ಪ್ರತಿಗಳನ್ನು (ಎಲೆಕ್ಟ್ರಾನಿಕ್ ಕಾಪಿ) ಕಂಪನಿಯಲ್ಲಿ ಅಥವಾ ಡಿಪಾಸಿಟರಿ ಪಾರ್ಟಿಸಿಪೆಂಟ್‌ರ ಬಳಿ ನೋಂದಾಯಿತ ಸದಸ್ಯರ ವಿ–ಅಂಚೆಗೆ ಜೂನ್ 18, 2019ರಂದು ಕಳುಹಿಸಲಾಗಿದೆ. ಇವು ಕಂಪೆನಿಯ ಜಾಲತಾಣ www.canfinhomes.com ನಲ್ಲಿಯೂ ಲಭ್ಯವಿದೆ ಹಾಗೂ ಕಂಪನಿಯ ಮೇಲಿನ ವಿಳಾಸದಲ್ಲಿ ಕಚೇರಿಯ ಕೆಲಸದ ಸಮಯದಲ್ಲಿ ಪರಿಶೀಲಿಸಲು ಲಭ್ಯವಿರುತ್ತದೆ. ಸಾಮಾನ್ಯ ಸಭಾ ಸೂಚನೆ, ವಿ–ಮತದಾನ ಮಾಡುವ ಕ್ರಮ ಮತ್ತು 2018–19ನೇ ಸಾಲಿನ ವಾರ್ಷಿಕ ವರದಿಗಳ, ಭೌತಿಕ ಪ್ರತಿಗಳ, ರವಾನೆಯನ್ನು ಇತರೆ ಸದಸ್ಯರ ನೋಂದಾಯಿತ ವಿಳಾಸಕ್ಕೆ ಅನುಮತಿಯಿರುವ ಮಾಧ್ಯಮದಲ್ಲಿ ಜೂನ್ 22, 2019ರಂದು ಪೂರ್ಣಗೊಳಿಸಲಾಗಿದೆ.
3. ಕಂಪನಿ ಕಾಯ್ದೆ 2013ರ 108ನೇ ವಿಭಾಗ ಹಾಗೂ ಅದರಡಿ ಬರುವ ನಿಯಮಗಳು/ತಿದ್ದುಪಡಿ ನಿಯಮಗಳು (ನಿಯಮ 20ನ್ನು ಒಳಗೊಂಡಂತೆ) ಹಾಗೂ ಸೆಬಿ (ಲಿಸ್ಟಿಂಗ್ ಓಬ್ಲಿಗೇಷನ್ಸ್ ಹಾಗೂ ಡಿಸ್ಕ್ಲೋಷರ್ ರೆಕ್ವಯರ್‌ಮೆಂಟ್ಸ್) ರೆಗ್ಯೂಲೇಷನ್ಸ್, 2015ರ ಅಡಿ ನಿಬಂಧ 44, ಇವುಗಳ ಪ್ರಕಾರ, ಕಂಪೆನಿಯು ನ್ಯಾಷನಲ್ ಸೆಕ್ಯುರಿಟೀಸ್ ಡಿಪಾಸಿಟರಿ ಲಿಮಿಟೆಡ್ (ಎನ್‌ಎಸ್‌ಡಿಎಲ್) ಒದಗಿಸಿದ ಇ–ವೋಟಿಂಗ್ ವೇದಿಕೆಯ ಮೂಲಕ, ಸೂಚನೆಯಲ್ಲಿ ತಿಳಿಸಿರುವ ಎಲ್ಲಾ ನಿರ್ಧಾರಗಳಿಗೆ (Resolutions), ವಿ–ಮತದಾನ ಪ್ರಕ್ರಿಯೆಯನ್ನು ಒದಗಿಸಿದೆ ಮತ್ತು ನ್ಯಾಯಯುತ ಮತ್ತು ಪಾರದರ್ಶಕ ರೀತಿಯಲ್ಲಿ ನಡೆಸುವುದಕ್ಕಾಗಿ, ಶ್ರೀ ಎಸ್. ಕೇದಾರ್‌ನಾಥ್ (ಎಫ್‌ಸಿಎಸ್ 3031), ಪ್ರಾಕ್ಟೀಸಿಂಗ್ ಕಂಪನಿ ಸೆಕ್ರೆಟರಿ, ಬೆಂಗಳೂರು, ಇವರನ್ನು ಪರೀಕ್ಷಕರನ್ನಾಗಿ ನೇಮಿಸಿದೆ. ಈ ನಿಟ್ಟಿನಲ್ಲಿ ಕಂಪನಿ ತನ್ನ ಸದಸ್ಯರಿಗೆ ಈ ಕೆಳಗಿನ ಮಾಹಿತಿಗಳನ್ನು ಸೂಚಿಸುತ್ತಿದೆ:
   - ಅ. ವಾರ್ಷಿಕ ಸಾಮಾನ್ಯ ಸಭೆಯ ಸೂಚನಾ ಪತ್ರದಲ್ಲಿ ಸೂಚಿತವಾದ ವಹಿವಾಟುಗಳನ್ನು ವಿದ್ಯುನ್ಮಾನ ಮತದಾನದ ಮೂಲಕ ನಿರ್ಣಯಿಸಬಹುದಾಗಿರುತ್ತದೆ.
   - ಆ. ವಿದ್ಯುನ್ಮಾನ ರೀತ್ಯಾ ಅಥವಾ ಸಭೆಯಲ್ಲಿ ಮತದಾನ ಮಾಡಲು ಅರ್ಹತೆ ನಿರ್ಣಯಿಸುವ ದಿನಾಂಕ: ಜುಲೈ 10, 2019
   - ಇ. ರಿಮೋಟ್ ಇ–ವೋಟಿಂಗ್ (ಸದೂರ ವಿ–ಮತದಾನ) ಆರಂಭವಾಗುವ ದಿನಾಂಕ: ಜುಲೈ 12, 2019, (ಬೆಳಿಗ್ಗೆ 9:00 ಗಂಟೆ).
   - ಈ. ರಿಮೋಟ್ ಇ–ವೋಟಿಂಗ್ ಮುಕ್ತಾಯವಾಗುವ ದಿನಾಂಕ: ಜುಲೈ 16, 2019 (ಸಂಜೆ 5:00 ಗಂಟೆ).
   - ಉ. ವಾರ್ಷಿಕ ಸರ್ವಸದಸ್ಯರ ಸಭಾ ಸೂಚನೆ ರವಾನೆಯಾದ ನಂತರ ಕಂಪನಿಯ ಷೇರುಗಳನ್ನು ಪಡೆದುಕೊಳ್ಳುವ ಮತ್ತು ಕಂಪನಿಯ ಸದಸ್ಯರಾಗುವ ಯಾವುದೇ ವ್ಯಕ್ತಿ ನಿರ್ಣಾಯಕ ದಿನಾಂಕ, ಅಂದರೆ ಜುಲೈ 10, 2019ರೊಳಗೆ ಷೇರುಗಳನ್ನು ಹೊಂದಿದ್ದರೆ, ಸದರಿ ವ್ಯಕ್ತಿಗಳು ತಮ್ಮ ಲಾಗಿನ್ ಐಡಿ ಮತ್ತು ಪಾಸ್‌ವರ್ಡ್‌ನ್ನು evoting@nsdl.co.in ಇಲ್ಲಿಗೆ ಕೋರಿಕೆ ಸಲ್ಲಿಸಿ ಪಡೆದುಕೊಳ್ಳಬಹುದು. ಆದಗ್ಯೂ, ಯಾವುದೇ ವ್ಯಕ್ತಿ ಈಗಾಗಲೇ ಎನ್‌ಎಸ್‌ಡಿಎಲ್‌ನಲ್ಲಿ ಇ–ವೋಟಿಂಗ್‌ನಲ್ಲಿ ನೋಂದಾಯಿಸಿದ್ದಲ್ಲಿ, ಈಗಾಗಲೇ ಅಸ್ತಿತ್ವದಲ್ಲಿರುವ ಲಾಗಿನ್ ಐಡಿ ಮತ್ತು ಪಾಸ್‌ವರ್ಡ್‌ನ್ನು ಮತಚಲಾವಣೆಗೆ ಬಳಸಬಹುದಾಗಿರುತ್ತದೆ.
   - ಊ. ಸದಸ್ಯರ ಗಮನಕ್ಕೆ: ಅ) ಸದೂರ ಇ–ವೋಟಿಂಗ್ ವ್ಯವಸ್ಥೆಯನ್ನು ಎನ್‌ಎಸ್‌ಡಿಎಲ್ ದಿನಾಂಕ ಜುಲೈ 16, 2019 ಸಂಜೆ 5:00 ಗಂಟೆಗೆ ನಿಷ್ಕ್ರಿಯಗೊಳಿಸುತ್ತದೆ ಮತ್ತು ಒಮ್ಮೆ ಮತಚಲಾಯಿಸಿದ ನಂತರ ಸದಸ್ಯ ಅದನ್ನು ಬದಲಿಸಲು ಅವಕಾಶವಿರುವುದಿಲ್ಲ. ಆ) ಮತಪತ್ರಗಳ ಮೂಲಕ ಮತಚಲಾಯಿಸುವ ಸೌಲಭ್ಯವನ್ನು (ಭೌತಿಕ/ವಿದ್ಯುನ್ಮಾನ) ಸಭೆಯ ಸ್ಥಳದಲ್ಲಿ ಕಲ್ಪಿಸಲಾಗಿರುತ್ತದೆ. ಇ) ವಾರ್ಷಿಕ ಸಾಮಾನ್ಯ ಸಭೆಗೆ ಮುಂಚಿತವಾಗಿ ಸದೂರ ಇ–ವೋಟಿಂಗ್ ಮೂಲಕ ಮತಚಲಾಯಿಸಿದವರು ವಾರ್ಷಿಕ ಸಾಮಾನ್ಯ ಸಭೆಗೆ ಹಾಜರಾಗಬಹುದು ಆದರೆ ಮತ್ತೊಮ್ಮೆ ಮತಚಲಾಯಿಸುವ ಅವಕಾಶವಿರುವುದಿಲ್ಲ, ಮತ್ತು ಈ) ನಿರ್ಣಾಯಕ ದಿನಾಂಕ ಜುಲೈ 10, 2019ರೊಳಗೆ ಸದಸ್ಯರ ರಿಜಿಸ್ಟರ್‌ನಲ್ಲಿ ದಾಖಲಾಗಿರುವ ಹೆಸರಿನ ಸದಸ್ಯರು ಅಥವಾ ಡಿಪಾಸಿಟರೀಸ್ ಅವರಲ್ಲಿನ ಲಾಭಹಕ್ಕುದಾರರ ರಿಜಿಸ್ಟರ್‌ನಲ್ಲಿ ದಾಖಲಾಗಿರುವ ಸದಸ್ಯರು ಮಾತ್ರ ಸದೂರ ಇ–ವೋಟಿಂಗ್ ಅಥವಾ ವಾರ್ಷಿಕ ಸಾಮಾನ್ಯ ಸಭೆ ನಡೆಯುವಲ್ಲಿ ಮತಪತ್ರದ ಮೂಲಕ ಮತದಾನ ಮಾಡುವ ಅವಕಾಶವನ್ನು ಹೊಂದಿರುತ್ತಾರೆ.
   - ಋ. ವಾರ್ಷಿಕ ಸರ್ವಸದಸ್ಯರ ಸಭಾ ಸೂಚನೆ, 2018–19ನೇ ಸಾಲಿನ ವಾರ್ಷಿಕ ವರದಿ ಹಾಗೂ ವಿ–ಮತದಾನ ಮಾಡುವ ಕ್ರಮ ಕಂಪನಿಯ ಜಾಲತಾಣ http://www.canfinhomes.com ಮತ್ತು ಎನ್‌ಎಸ್‌ಡಿಎಲ್‌ನ ಜಾಲತಾಣ www.evoting.nsdl.com ದಲ್ಲಿ ಸಹ ಲಭ್ಯವಿರುತ್ತದೆ.
   - ಎ. ಸಂದೇಹಗಳಿದ್ದಲ್ಲಿ, ಸದಸ್ಯರು, 'ಸದಸ್ಯರ ಸಾಮಾನ್ಯ ಸಂದೇಹಗಳ ವಿಭಾಗ'ವನ್ನು (FAQ) ಮತ್ತು 'ಇ–ವೋಟಿಂಗ್ ಬಳಕೆದಾರ ಕೈಪಿಡಿ'ಯನ್ನು www.evoting.nsdl.com ದಲ್ಲಿನ ಡೌನ್‌ಲೋಡ್ ವಿಭಾಗದಲ್ಲಿ ನೋಡಬಹುದು ಅಥವಾ ಉಚಿತ ಕರೆಸಂಖ್ಯೆ 1800–222–990ಗೆ ಕರೆಮಾಡಬಹುದು ಅಥವಾ ಶ್ರೀಮತಿ ಪಲ್ಲವಿ ಮ್ಹಾತ್ರೆ, ಸಹಾಯಕ ವ್ಯವಸ್ಥಾಪಕರು, ನ್ಯಾಷನಲ್ ಸೆಕ್ಯೂರಿಟೀಸ್ ಡಿಪಾಸಿಟರಿ ಲಿ. ಟ್ರೇಡ್ ವರ್ಲ್ಡ್, 'ಎ' ವಿಂಗ್ 4ನೇ ಮಹಡಿ, ಕಮಲ ಮಿಲ್ ಕಾಂಪೌಂಡ್, ಸೇನಾಪತಿ ಬಾಪತ್ ಮಾರ್ಗ, ಲೋವರ್ ಪ್ಯಾರಲ್, ಮುಂಬೈ–400013 ದೂರವಾಣಿ: +9122–24994545, ಇ–ಮೇಲ್: pallavid@nsdl.co.in ಅಥವಾ evoting@nsdl.co.in ಇವರನ್ನು ಸಂಪರ್ಕಿಸಬಹುದು.
4. **2018–19ನೇ ಆರ್ಥಿಕ ವರ್ಷದ ಲಾಭಾಂಶಕ್ಕೆ ಷೇರುದಾರರ ಅರ್ಹತೆ ನಿರ್ಧರಿಸುವಿಕೆ ಮತ್ತು ವಾರ್ಷಿಕ ಸಾಮಾನ್ಯ ಸಭೆಯ [ಕಂಪನಿಗಳ ಕಾಯ್ದೆ(ನಿರ್ವಹಣೆ ಮತ್ತು ಆಡಳಿತ) ನಿಯಮ 10 ಹಾಗೂ ಪರಿಚ್ಛೇದ 91ರ ಅನ್ವಯ] ಉದ್ದೇಶಕ್ಕಾಗಿ ಕಂಪನಿಯ ಸದಸ್ಯರ ರಿಜಿಸ್ಟರ್ ಅನ್ನು ಗುರುವಾರ, ಜುಲೈ 11, 2019 ರಿಂದ ಬುಧವಾರ, ಜುಲೈ 17, 2019ರ ವರೆಗೆ(ಎರಡೂ ದಿನಗಳು ಸೇರಿದಂತೆ) ಸ್ಥಗಿತಗೊಳಿಸಲಾಗುತ್ತದೆ.**

ಕ್ಯಾನ್ ಫಿನ್ ಹೋಮ್ಸ್ ಲಿಮಿಟೆಡ್ ಪರವಾಗಿ
ಸಹಿ/–
**ವೀಣಾ ಜಿ. ಕಾಮತ್**
ಕಂಪನಿ ಕಾರ್ಯದರ್ಶಿ

ಸ್ಥಳ : ಬೆಂಗಳೂರು
ದಿನಾಂಕ : ಜೂನ್ 22, 2019